
# ಆಟದ ನಿಯಮಗಳು



ಪ್ರತಿಯೊಂದು ಆಟಕ್ಕೂ ಅದರದೇ ಆದ ನಿಯಮಗಳಿರುತ್ತವೆ. ಆದರೆ, ಶಕ್ತಿಯಿದ್ದವರು ತಮ್ಮದೇ ಆದ ನಿಯಮಗಳನ್ನು ರೂಪಿಸುತ್ತಾರೆ, ಅದರಂತೆಯೇ ಎಲ್ಲಾ ಆಟಗಳನ್ನು ಆಡುತ್ತಾರೆ, ಇನ್ನೊಬ್ಬರಿಂದಲೂ ಆಡಿಸುತ್ತಾರೆ, ಅದೇ ನಿಯಮಗಳಿಂದ ತಮ್ಮನ್ನು ತಾವೇ 'ವಿಜಯಿ' ಎಂದು ಘೋಷಿಸಿಕೊಂಡು, ಬಹುಮಾನಗಳನ್ನೂ ಪಡೆಯುತ್ತಾರೆ. ಅಲ್ಲದೆ, 'ಈ ನಿಯಮಗಳನ್ನೇ ಸದಾ ಕಾಲದಿಂದ ಸರಿ ಎಂದು ಒಪ್ಪಲಾಗಿತ್ತು, ಇವುಗಳನ್ನೇ ಕೆಲವರು ಬಲಾತ್ಕಾರದಿಂದ ಬದಲಾವಣೆ ಮಾಡಿದ್ದರು, ಆದರೆ ಇಂದಿನಿಂದ ಈ ಸರಿಯಾದ ನಿಯಮಗಳೇ ಜಾರಿಯಲ್ಲಿರುತ್ತವೆ.' ಎಂದೂ ಹೇಳುತ್ತಾರೆ.

ನಂತರ ಇವೇ ನಿಯಮಗಳಾಗುತ್ತವೆ, ಪ್ರತಿ ಬಾರಿಯೂ ಶಕ್ತಿಶಾಲಿಯೇ ಗೆಲ್ಲುತ್ತಾನೆ. ಕಡೆಗೆ ಅವನಿಗಿಂತಲೂ ಹೆಚ್ಚು ಶಕ್ತಿಶಾಲಿ ಬರುತ್ತಾನೆ, ಮತ್ತೆ ಅದೇ ಘಟಿಸುತ್ತದೆ. ಅಂದರೆ ಅವನು ತನ್ನ ಹೊಸ ನಿಯಮಗಳನ್ನು ಸೃಷ್ಟಿಸುತ್ತಾನೆ, ಆ ನಿಯಮಗಳಿಂದ ಗೆಲ್ಲುತ್ತಾ ಮುಂದುವರೆಯುತ್ತಾನೆ. ಈ ಪ್ರಕಾರವಾಗಿ ಪ್ರತಿಯೊಂದು ಆಟವನ್ನು ಸಹ ನಿಯಮಬದ್ಧವಾಗಿಯೇ ಆಡಲಾಗುತ್ತದೆ.

# ಹಿಟ್ಲರನ ಸಮಯ

ಪ್ರತಿಯೊಬ್ಬರಿಗೂ ತಮ್ಮದೇ ಆದ ಒಂದು ಸಮಯವಿರುತ್ತದೆ. ಹಿಟ್ಲರನಿಗೂ ಅವನದೇ ಆದ ಸಮಯವಿತ್ತು.

ತನ್ನ ಕಾಲ ಈಗ ಇಲ್ಲ ಎಂಬುದು ಹಿಟ್ಲರನಿಗೆ ಅರಿವಾದಾಗ, ಅವನು ವಿಷದ ಪುಡಿಯನ್ನು ತಿಂದ. ಯಾಕೆಂದರೆ, ತಾನು ಜೀವಂತವಾಗಿ ಹಿಡಿಯಲ್ಪಟ್ಟರೆ, ತನ್ನೊಂದಿಗೆ ಯಾವಯಾವ ರೀತಿಯಲ್ಲಿ ವರ್ತಿಸಲಾಗುವುದು ಎಂಬ ಬಗ್ಗೆ ಅವನಿಗೆ ತಿಳಿದಿತ್ತು.



ಆದರೆ, ಬಹಳಷ್ಟು ಹಿಟ್ಲರ್‌ಗಳು ಅಪಾಯವನ್ನು ಅರಿಯಲಾರರು. ಪ್ರತಿಯೊಂದು ಪರಿಸ್ಥಿತಿಯಲ್ಲೂ ಬದುಕಿರಲು ಹವಣಿಸುತ್ತಾರೆ. ಸಾವು ಭಯಾನಕವಾಗಿ ಎದುರಿಗೆ ಬಂದಾಗ, ಯಾರೂ ಸಹ ಅವನಿಗೆ ಸಾಯಲು ವಿಷದ ಪುಡಿಯನ್ನು ಸಹ ತಂದು ಕೊಡಲು ಬಯಸುವುದಿಲ್ಲ. ಅಲ್ಲದೆ ಅವನಿಗಾಗಿ ಹಣವನ್ನು ಖರ್ಚು ಮಾಡುವುದು ಹಣದ ದುಂದುವೆಚ್ಚವೆಂದು ತಿಳಿಯುತ್ತಾರೆ. ಇಷ್ಟು ಹಣ ನಾಶ ಮಾಡುವುದಕ್ಕೆ ಬದಲು ಈ ಹಣದಿಂದ ತಾನು ಐಸ್‌ಕ್ರೀಮನ್ನು ತಿನ್ನುವುದು ಮತ್ತು ತನ್ನ ಮಕ್ಕಳಿಗೆ ತಿನ್ನಿಸುವುದು ಹೆಚ್ಚು ಉಪಯೋಗಕರ ಎಂದು ಯೋಚಿಸುತ್ತಾನೆ.